ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 18-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸಾಯಿ ಸದನ್ ಅಪಾರ್ಟ್ಮೆಂಟ್ ಗೆ ಸಂಬಂದಪಟ್ಟಂತೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ಐಟಿ ರಿಟನ್ಸ್ ಗಳನ್ನು ನೋಡಿ ತಿಳಿದುಕೊಂಡಿಲ್ಲ. ಅವರು ಎಷ್ಟು ಆದಾಯವನ್ನು ಐಟಿ ರಿಟನ್ಸ್ ನಲ್ಲಿ Declare ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಕಟ್ಟಡ ಕಟ್ಟುವ ಬಗ್ಗೆ ಯಾರಿಂದ ಎಷ್ಟು ಸಾಲ ಪಡೆದಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸಾಲ ಪಡೆದಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ತಾಯಿ ಬಟ್ಟೆ ಹೊಲಿಯುವುದು , ಟ್ಯೂಷನ್ ಮಾಡುವುದು , crafting ಮಾಡಿ ಆದಾಯ ಮಾಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ಆ ರೀತಿ ಕಾಣಿಸಿದ್ದಾನೆ ಎಂದು ತಿಳಿಸಿರುತ್ತಾರೆ. ನಿಮ್ಮ ತಾಯಿ ಕಟ್ಟಡ ಕಟ್ಟಲು ಯಾವ ಆದಾಯದ ಮೂಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿಯ ತಾಯಿ ಆಸ್ತಿಯನ್ನು ಕಲ್ಲಡ್ಕ ದಲ್ಲಿ ಮಾರಾಟ ಮಾಡಿದ್ದು ಅದರ ಅಡ್ವಾನ್ಸ್ ಆಗಿ ರೂ 11 ಲಕ್ಷ ಬಂದಿತ್ತು ಎಂದು ತಿಳಿಸಿರುತ್ತಾರೆ. ಕಟ್ಟಡ ಕಟ್ಟಲು ನನ್ನ ಅಜ್ಜಿಯ ಕಲ್ಲಡ್ಕದ ಆಸ್ತಿಯನ್ನು ಮಾರಾಟ ಮಾಡಿದ್ದು ಮಾತ್ರ ಅಲ್ಲದೇ ಇಂದ್ರಾಳಿ ಆಸ್ತಿಯನ್ನು ಮಾರಾಟ ಮಾಡಿದಾಗ ಹಣ ಬಂದಿರುತ್ತದೆ ಮತ್ತು ನನ್ನ ತಂದೆಯ ದುಡ್ಡು ಸಹ ಇತ್ತು ಇದು ಎಲ್ಲವನ್ನು ಸೇರಿಸಿ ಕಟ್ಟಿಸಿರುತ್ತಾರೆ. ಈ ವಿಚಾರವನ್ನು ನನ್ನ ತಾಯಿ ಹೇಳಿರುತ್ತಾರೆ ಮತ್ತು ನಾವು ಕಟ್ಟಡ ಕಟ್ಟಿರುತ್ತೇವೆ ಆದ್ದರಿಂದ ಗೊತ್ತಿರುತ್ತದೆ ಎಂದು ತಿಳಿಸಿರುತ್ತಾರೆ . ಈ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ಸಾಕ್ಷಿ ಮುಂದುವರಿದು ನನ್ನ ಅಣ್ಣ ಒಂದನೇ ಪ್ರತಿವಾದಿ ಬಳಿ ಇರುತ್ತದೆ ಎಂದು ತಿಳಿಸಿರುತ್ತಾರೆ . ಕಟ್ಟಡ ಕಟ್ಟಲು ಪ್ರಾರಂಭಿಸಿದ ಸಮಯದಲ್ಲಿ ನನ್ನ ತಂದೆಗೆ ಯಾವುದೇ ಪಿಂಚಣಿ ಬರುತಿರಲಿಲ್ಲ ಎಂದರೆ ನೆನಪಿಲ್ಲ . ನನ್ನ ತಂದೆ ಕಟ್ಟಡ ಕಟ್ಟುವ ಸಮಯದಲ್ಲಿ ಅಂದರೆ 1995-96 ರಲ್ಲಿ ನಿವೃತ್ತಿ ಆಗಿದ್ದರು ಎಂದರೆ ಸರಿ. 37 flat ಗಳನ್ನು ಮಾರಿದಾಗ ಎಷ್ಟು ಆದಾಯ ಬಂದಿತು ಎಂದು ತಿಳಿದುಕೊಂಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಾಖಲೆಗಳಲ್ಲಿ 90 ಲಕ್ಷ ಎಂದು ಕಾಣಿಸಲಾಗಿದೆ ಮತ್ತು ಕಪ್ಪು ಹಣವಾಗಿ ಸಹ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ. ನಾನು ಆದಾಯ ತೆರಿಗೆ ಇಲಾಖೆಯಿಂದ ನನ್ನ ತಾಯಿ ರಿಟನ್ಸ್ನು ಕೇಳಿ ಪಡೆದುಕೊಂಡಿಲ್ಲ. 37flat ಗಳನ್ನು ಮಾರಾಟ ಮಾಡಿದಾಗ ಎಷ್ಟು ಹಣ ಬಂದಿತು ಎಂದು ನಾವೆಲ್ಲರೂ ಮಾತನಾಡಿದ್ದೇವೆ ಆದರೇ ನಾನು ಬರೆದುಕೊಂಡಿಲ್ಲ. ಈ ಕೇಸನ್ನು ಮಾಡುವಾಗ ನಾನು ಎಷ್ಟು ಹಣ ಬಂದಿತು ಎಂದು ನಾನು ಲೆಕ್ಕಚಾರ ಮಾಡಿಲ್ಲ ಆದರೇ ಬಾಯಿ ಮಾತಿನಲ್ಲಿ ಗೊತ್ತಿರುತ್ತದೆ. ಸಾಕ್ಷಿ ಮುಂದುವರಿದು 37flat ಗಳಿಂದ ಸುಮಾರು 3.5 ಕೋಟಿ ಬಂದಿರುತ್ತದೆ. 37 flat ಮಾರಾಟ

ಮಾಡಿದ್ದರಿಂದ 3.5 ಕೋಟಿ ಬಂದಿದೆ ಎಂದು ನಮ್ಮ ವಾದಪತ್ರದಲ್ಲಿ ಕಾಣಿಸಿಲ್ಲ. 3.5 ಕೋಟಿ ಬಂದಿದೆ ಎಂದು ನಾನು ಆದಾಯ ತೆರಿಗೆ ಇಲಾಖೆಗೆ ತಿಳಿಸಿಲ್ಲ ಕಾರಣ 2020 ರವರೆಗೆ ಎಲ್ಲವನ್ನು ನನ್ನ ಅಣ್ಣ ಒಂದನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಎಂದು ತಿಳಿಸಿರುತ್ತಾರೆ . ದಾಖಲೆಗಳ ಪ್ರಕಾರ ಆ ಎಲ್ಲಾ flat ನ ದುಡ್ಡು ನನ್ನ ತಾಯಿಗೆ ಸೇರಿರುತ್ತದೆ . ಸಾಕ್ಷಿ ಮುಂದುವರಿದು ಅದು ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಮತ್ತು ಕುಟುಂಬದ ಹಣ ಎಂದು ತಿಳಿಸಿರುತಾರೆ . ನನ್ನ ಕುಟುಂಬಕ್ಕೆ ಖಾತೆ ಇತ್ತಾ ಇಲ್ಲವಾ ಎಂದು ನೆನಪಿಲ್ಲ . ಈ flat ಗಳಿಂದ ಬಂದ ಹಣ ಯಾವ ಖಾತೆಗೆ ಜಮೆ ಆಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸ್ವಲ್ಪ ಸೊಸೈಟಿಯಲ್ಲಿ ಜಮೆ ಆಯಿತು ಮತ್ತು ಬ್ಯಾಂಕ್ ನಲ್ಲಿ ಇಡುತಿದ್ದರು ಹಾಗೂ ನಗದಿನ ರೂಪದಲ್ಲಿ ಸಹ ಮನೆಯಲ್ಲಿ ಇಡುತಿದ್ದರು ಎಂದು ತಿಳಿಸಿರುತ್ತಾರೆ . ಕ್ರಯಪತ್ರದ ಪ್ರಕಾರ flat ಗಳನ್ನು ಮಾರಾಟ ಮಾಡಿದಾಗ ಚೆಕ್ ಮತ್ತು ಡಿಡಿ ಮುಖೇನ ಹಣ ಪಾವತಿಸಿದ್ದು ಆ ಚೆಕ್ ಮತು ಡಿಡಿ ಗಳನ್ನು ಯಾವ ಖಾತೆಗೆ ಹಾಕುತಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಡಗಬೆಟ್ಟು ಕೋ ಆಪರೇಟಿವ್ ಸೊಸೈಟಿಗೆ ಹಾಕುತಿದ್ದರು . ಸಾಕ್ಷಿ ಮುಂದುವರಿದು ಸದ್ರಿ ಸೊಸೈಟಿಯಲ್ಲಿ ನನ್ನ ತಾಯಿಯ ವೈಯಕ್ತಿಕ ಖಾತೆ ಮತ್ತು ಸಾಯಿ ಸದನ ಅಪಾರ್ಟ್ಮೆಂಟ್ ನ ಖಾತೆ ಕೂಡ ಇತ್ತು ಎಂದು ತಿಳಿಸಿರುತಾರೆ. ಸಾಯಿ ಸದನ ಅಪಾರ್ಟ್ ಮೆಂಟ್ ಗೆ ಸಂಬಂದಪಟ್ಟಂತೆ ವಿದ್ಯುತ್ ಕೇಂದ್ರದಿಂದ ಪಡೆದ ದಾಖಲೆ, ಕಂದಾಯ ಇಲಾಖೆಯಿಂದ ಪಡೆದ ದಾಖಲೆ, ಮುನ್ಸಿಪಾಲಿಟಿಯಿಂದ ದಾಖಲೆ ಹಾಗೂ ಕ್ರಯ ಚೀಟಿಗಳು ಎಲ್ಲವೂ ಕೂಡ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಜಿಪಿಎ ಹೋಲ್ಡರ್ ಆಗಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಇದ್ದರು ಅವರು ಎಲ್ಲವನ್ನು ತಯಾರಿಸುತಿದ್ದರು ಎಂದು ತಿಳಿಸಿರುತಾರೆ. ಸಾಯಿ ಸದನ ಅಪಾರ್ಟ್ಮೆಂಟ್ ನ ಆಸ್ತಿ ಕುಟುಂಬ ಆಸ್ತಿ ಎಂದು ತೋರಿಸಲು ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನನ್ನ ತಾಯಿಯ ಆಸ್ತಿ ಮತ್ತು ನನ್ನ ತಂದೆ ಕೂಡ ಅದಕ್ಕೆ ಹಣ ಹಾಕಿದ್ದರು ಎಂದು ತಿಳಿಸಿರುತಾರೆ . ಸಾಯಿ ಸದನ ಅಪಾರ್ಟ್ಮೆಂಟ್ ಕಟ್ಟಿಸಲು ನನ್ನ ತಂದೆ ಎಷ್ಟು ಹಣ ಹಾಕಿದ್ದಾರೆ ಎಂದು ನನಗೆ ನೆನಪಿಲ್ಲ . ನಿಮ್ಮ ತಾಯಿಯ ಐಟಿ ರಿಟನ್ಸ ಗೆ ಸಂಬಂದಪಟ್ಟಂತೆ ಎಲ್ಲಾ ದಾಖಲೆಗಳನ್ನು ನೋಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನೇ ನೋಡಿಕೊಳ್ಳುತಿದ್ದ . ನಮಗೆ ಆತ ಯಾವುದೇ ದಾಖಲೆಗಳನ್ನು ತೋರಿಸಿರಲಿಲ್ಲ ಎಂದು ತಿಳಿಸಿರುತ್ತಾರೆ . ನಾನು ಆದಾಯ ತೆರಿಗೆ ಇಲಾಖೆಯಿಂದ ನನ್ನ ತಾಯಿ ಸಲ್ಲಿಸಿದ್ದ ರಿಟನ್ಸ್ನ್ನು ನೋಡಲು ಪ್ರಯತ್ನ ಪಟ್ಟಿಲ್ಲ . ಸಾಕ್ಷಿ ಮುಂದುವರಿದು ಅದರ ಅವಶ್ಯಕತೆ ಇರಲಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ತಾಯಿ ಕೆಲವು flat ಗಳನ್ನು ಸ್ವತಃ ಅವರೇ ಕ್ರಯಪತ್ರ ಬರೆದು ಮಾರಾಟ ಮಾಡಿದ್ದು ಸ್ವಲ್ಪ flat ಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ನ್ನನ ತಾಯಿಯ ಜಿಪಿಎ ಹೋಲ್ಡರ್ ಆಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ತಾಯಿ ಸ್ವತಃ ಮಾರಾಟ ಮಾಡಿದಾಗಲೂ ಕೂಡ ನನ್ನ ಅಣ್ಣ ಒಂದನೇ ಪ್ರತಿವಾದಿ ಕರೆದುಕೊಂಡು ಹೋಗುತಿದ್ದರು ಎಂದು ತಿಳಿಸಿರುತ್ತಾರೆ. ಸಾಯಿ ಸದನ ಪ್ಲಾಟ್ ಗಳನ್ನು ಮಾರಾಟ ಮಾಡಿದ ಬಗ್ಗೆ ಕ್ರಯಪತ್ರಗಳ್ನು ನೀವು ಒಪ್ಪುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಪ್ಪುತ್ತೇನೆ ಎಂದು ತಿಳಿಸಿರುತ್ತಾರೆ .

ಒ.ಎಸ್. - 34/2020

ಪಿ.ಡಬ್ಲ್ಯು - 01

**ಈ ಹಂತದಲ್ಲಿ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದುಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.